**ಸಾಕ್ಷಿಯನ್ನು ದಿನಾಂಕಃ 06.01.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ನಂ. ಡಿ1(ಎ) ರಿಂದ (ಡಿ) ರವರ ಪರ ಶ್ರೀ. ಎಂ.ಎನ್.ಆರ್. ವಕೀಲರಿಂದಃ**

ನಾನು ದಾವೆ ಹಾಕುವ ಸಂದರ್ಭದಲ್ಲಿ ಮುಖ್ತ್ಯಾರ್ ನಾಮೆಯನ್ನು ಹಾಜರುಪಡಿಸಿರುತ್ತೇನೆ. ವಾದಿ ನನ್ನ ತಾಯಿ. ನನ್ನ ತಾಯಿ ಬಿದರಹಳ್ಳಿ ಗ್ರಾಮದಲ್ಲಿ ವಾಸವಿರುತ್ತಾರೆ. ನಾನು ಕೂಡ ಬಿದರಹಳ್ಳಿ ಗ್ರಾಮದಲ್ಲಿ ವಾಸವಿರುತ್ತೇನೆ. ಮೃತ 1 ನೇ ಪ್ರತಿವಾದಿಯ ತಂದೆಯ ಹೆಸರು ಮರಲಿಂಗನಾಯಕ ತಮ್ಮನಾಯಕ. ಮೃತ 1 ನೇ ಪ್ರತಿವಾದಿ ಕೂಡ ಬಿದರಹಳ್ಳಿ ಗ್ರಾಮದವರು ಎಂದರೆ ಅವರು ಸುಮಾರು 20 ವರ್ಷಗಳಿಂದ ಬಿದರಹಳ್ಳಿಯಲ್ಲಿ ವಾಸವಿರುತ್ತಾರೆ. ಬಿದರಹಳ್ಳಿ ಗ್ರಾಮದಲ್ಲಿ ಮರಲಿಂಗನಾಯಕರವರಿಗೆ ಜಮೀನು ಇರುವುದಿಲ್ಲ. ಬಿದರಹಳ್ಳಿ ಗ್ರಾಮದಲ್ಲಿ ಮರಲಿಂಗನಾಯಕರವರಿಗೆ ಸ.ನಂ. 653 ರಲ್ಲಿ 03 ಎಕರೆ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಮರಲಿಂಗನಾಯಕರವರ ಜಮೀನು ಕಬಿನಿ ಜಲಾಶಯಕ್ಕೆ ಮುಳುಗಡೆಯಾದ ನಂತರ ದಿನಾಂಕಃ 31.10.1974 ರಂದು ಸ.ನಂ. 653 ರಲ್ಲಿ 03 ಎಕರೆ ಅಸ್ತಿ ಮಂಜೂರಾಗಿದ್ದ ವಿಚಾರ ನನಗೆ ಗೊತ್ತಿದ್ದರು ಕೂಡ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂ. 571, 651 ಮತ್ತು 655 ರ ಜಮೀನು ಯಾರಿಗೆ ಸೇರಿದ್ದು ಎಂದು ನಾನು ತಿಳಿದುಕೊಂಡಿಲ್ಲ. ಬಿದರಹಳ್ಳಿ ಗ್ರಾಮದಲ್ಲಿರುವ ಸರ್ಕಾರಿ ಓಣಿಯ ಅಕ್ಕ-ಪಕ್ಕದಲ್ಲಿ ಯಾವ ಸ.ನಂ. ಜಮೀನುಗಳು ಇರುತ್ತವೆ ಎಂದು ನಾನು ತಿಳಿದುಕೊಂಡಿಲ್ಲ. ವೀರಭದ್ರಪ್ಪರವರಿಂದ ಶಿವುರವರು ಕ್ರಯಕ್ಕೆ ಪಡೆದ ಜಮೀನಿನ ಸ.ನಂ. ನನಗೆ ಗೊತ್ತಿಲ್ಲ ಆದರೆ ನಮ್ಮ ಜಮೀನಿನ ಪೂರ್ವಕ್ಕೆ ಶಿವುರವರ ಜಮೀನು ಇರುತ್ತದೆ. ತಿಮ್ಮನಾಯಕ ಮತ್ತು ಸುಂದರಮ್ಮರವರ ಜಮೀನಿನ ಸ.ನಂ. ನನಗೆ ಗೊತ್ತಿಲ್ಲ. ಸರ್ಕಾರಿ ರಸ್ತೆ ಯಾವ ಸ.ನಂ. ಮೂಲಕ ಹಾದು ಹೋಗಿದೆ ಎಂದು ನಾನು ತಿಳಿದುಕೊಂಡಿಲ್ಲ. ಬಸವರಾಜಪ್ಪ ಮತ್ತು ಜ್ಯೋತಿರವರ ಜಮೀನಿನ ಸ.ನಂ. ಬಗ್ಗೆ ನಾನು ತಿಳಿದುಕೊಂಡಿಲ್ಲ. ಸಾಗುವಳಿ ಚೀಟಿಯ ಮೂಲ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ನಿ.ಪಿ.-2 ರಲ್ಲಿ ಸ್ಕೆಚ್ ಮೇರೆ ಎಂದು ನಮೂದಿಸಿದ್ದು, ಸದರಿ ಸ್ಕೆಚ್ ಅನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿಯು ತಾನು ಹಾಜರುಪಡಿಸಿರುವ ದಾಖಲೆಗಳನ್ನು ನೋಡಿ ಸ್ಕೆಚ್ ಇರುವುದಿಲ್ಲ ಎಂದು ನುಡಿಯುತ್ತಾರೆ.

ನಿ.ಪಿ.-2 ರಲ್ಲಿ ನಮೂದಿಸಿರುವ ರಾಮಾಚಾರಿಯವರ ತಂದೆಯ ಹೆಸರು ಸುಬ್ಬಾಚಾರ್ ಆಗಿರುತ್ತಾರೆ. ನಿ.ಪಿ.-11 ರಂತೆ ತಹಸೀಲ್ದಾರ್, ಉಪ ವಿಭಾಗಾಧಿಕಾರಿಗಳು, ಜಿಲ್ಲಾಧಿಕರಿಗಳು ಹಾಗು ಮುಖ್ಯ ಕಾರ್ಯದರ್ಶಿಯವರಿಗೆ ನೋಟೀಸ್ ನೀಡಿರುವುದರ ಬಗ್ಗೆ ನಮೂದಿಸಿದ್ದು ಆ ರೀತಿ ನೋಟೀಸ್ ಅನ್ನು ಮೃತ 1 ನೇ ಪ್ರತಿವಾದಿಗೆ ನೀಡಿರುವುದಿಲ್ಲ. ಸ.ನಂ. 389/570 ರಲ್ಲಿ 03 ಎಕರೆ ಜಮೀನು ರಾಮಾಚಾರಿಯವರಿಗೆ ಮಂಜೂರಾಗಿದೆ ಎಂದು ಹೇಳುವ ಅಧಿಕೃತ ಜ್ಞಾಪನದ ಕಡತವನ್ನು ನಾನು ಹಾಜರುಪಡಿಸಿಲ್ಲ. ನನ್ನ ವಾದ ಪತ್ರದಲ್ಲಿ ಪೂರ್ವ-ಪಶ್ಚಿಮ ಮತ್ತು ದಕ್ಷಿಣಕ್ಕೆ ನಮೂದಿಸಿರುವ ಜಮೀನಿನ ಮಾಲೀಕರ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿಲ್ಲ. ಸುಬ್ಬಾಚಾರ್ ರವರಿಗೆ ಮೂರು ಜನ ಮಕ್ಕಳು, ಅವರುಗಳೆಂದರೆ ಕೃಷ್ಣಾಚಾರ್, ರಾಮಾಚಾರ್ ಮತ್ತು ಗೌರಮ್ಮ ಆಗಿರುತ್ತಾರೆ. ಸುಬ್ಬಾಚಾರ್ ರವರ ಜೀವಿತಾವಧಿಯಲ್ಲಿ ಯಾವುದಾದರು ವಿಭಾಗವಾಗಿತ್ತಾ ಎಂದರೆ ನನ್ನ ತಾತನನ್ನು ನಾನು ನೋಡಿಲ್ಲ. ಸುಬ್ಬಾಚಾರ್ ಹಾಗು ರಾಮಾಚಾರ್ ರವರು ಮೃತಪಟ್ಟಿರುತ್ತಾರೆಂದು ತೋರಿಸಲು ಅವರ ಮರಣ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿಲ್ಲ. ರಾಮಾಚಾರ್ ರವರಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ನಾಲ್ಕು ಜನ ಗಂಡು ಮಕ್ಕಳು. ಶಿವಲಿಂಗನಾಯಕರವರು ಪದೇ-ಪದೇ ಬಂದು ಜಮೀನು ತನ್ನದು ಎಂದು ತೊಂದರೆ ಕೊಡುತ್ತಿದ್ದರಿಂದ ಈ ದಾವೆ ಹಾಕಿರುತ್ತೇನೆ. 2 ರಿಂದ 5 ನೇ ಯಾವ ಕಾರಣಕ್ಕಾಗಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಮೃತ 1 ನೇ ಪ್ರತಿವಾದಿಯ ಜಮೀನಿನ ಚೆಕ್ ಬಂದಿಯನ್ನು ಸೇರಿಸಿ ದಾವೆ ಹಾಕಿ, ಆ ಜಮೀನನ್ನು ಕಬಳಿಸಬೇಕೆಂಬ ಉದ್ದೇಶದಿಂದ ಸುಳ್ಳು ದಾವೆ ಹಾಕಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಈ ಹಂತದಲ್ಲಿ ಮಾನ್ಯ ಶ್ರೀ. ಎಂ.ಎಸ್.ಆರ್. ವಕೀಲರು ಮುಂದಿನ ಪಾಟೀ ಸವಾಲಿಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**